ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):

ಅ) ಬೆಳಗಾವಿ ಜಿಲ್ಲೆಯ ಪರಸಗಡ ಮತಕ್ಷೇತ್ರದಲ್ಲಿ 2001ನೇ ಜನಗಣತಿಯ ಅನುಸಾರ 44320 ಕುಟುಂಬಗಳಿದ್ದು 36786 ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗಿತ್ತು. ಇವುಗಳ ಪೈಕಿ 2004ನೇ ಜುಲೈ ಮಾಹೆಯಿಂದ ಡಿಸೆಂಬರ್‌ವರೆಗೆ 1435 ಪಡಿತರ ಚೀಟಿಗಳನ್ನು ಅನರ್ಹವೆಂದು ಪರಿಗಣಿಸಿ ರದ್ದುಪಡಿಲಾಗಿರುತ್ತದೆ. ಹಾಲಿ ಈಗ 35351 ಪಡಿತರ ಚೀಟಿಗಳಿಗೆ ಆಹಾರ ಧಾನ್ಯ ವಿತರಿಸಲಾಗುತ್ತಿದೆ. ಇದು ಶೇ.79.76 ಆಗುವುದು, ಇಷ್ಟಾದರೂ ಕೆಲವು ಕುಟುಂಬಗಳಿಂದ ಹಳದಿ ಪಡಿತರ ಚೀಟಿಗಳಿಗೆ ಬೇಡಿಕೆ ಇರುವುದು.

ಆ) ಹೌದು.

ಇ) ಅನರ್ಹ ಫಲಾನುಭವಿಗಳಿಗೆ ಹಂಚಿಕೆಯಾದ ಹಳದಿ ಪಡಿತರ ಚೀಟಿಗಳ ಮರು ಪರಿಶೀಲನೆ ಮಾಡಿ ಅನರ್ಹ ಪಡಿತರ ಚೀಟಿಗಳನ್ನು ರದ್ದುಗೊಳಿಸಿ, ಅರ್ಹ ಕುಟುಂಬಗಳಿಗೆ ಬಿ.ಪಿ.ಎಲ್, ಪಡಿತರ ಚೀಟಿಗಳನ್ನು ವಿತರಿಸಲು ಸರ್ಕಾರಿ ಆದೇಶ ಸಂಖ್ಯೆ: ಅನಾಸ 114 ಡಿಆರ್‌ಎ 2004, ದಿನಾಂಕ: 10-1-2005ರಲ್ಲಿನ ಆದೇಶದಂತೆ ಮನೆ ಮನೆ ಪುನರ್ ಸಮೀಕ್ಷಾ ಕಾರ್ಯವನ್ನು ಜನವರಿ 2005ರಿಂದ ಪ್ರಾರಂಭಿಸಲಾಗಿದೆ. ಏಪ್ರಿಲ್ 2005ರ ಅಂತ್ಯಕ್ಕೆ ಪುನರ್ ಸಮೀಕ್ಷಾ ಕಾರ್ಯ ಪೂರ್ಣಗೊಳ್ಳಲಿದ್ದು, ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ಗ್ರಾಮಸಭೆಗಳಲ್ಲಿಟ್ಟು, ಅನುಮೋದನೆ ಪಡೆದ ನಂತರ ಅರ್ಹ ಕುಟುಂಬಗಳಿಗೆ ಬಿ.ಪಿ.ಎಲ್, ಪಡಿತರ ಚೀಟಿಗಳನ್ನು ವಿತರಿಸಲಾಗುವುದು. ಅನರ್ಹ ಪಡಿತರ ಚೀಟಿಗಳನ್ನು ರದ್ದುಗೊಳಿಸುವ ಕಾರ್ಯ ಮುಂದುವರೆದಿರುತ್ತದೆ.

1454(785) ಶ್ರೀ ನರಸಿಂಹಸ್ವಾಮಿ.ಜೆ(ದೊಡ್ಡಬಳ್ಳಾಪುರ) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೈತರು ಬೆಳೆದ ರಾಗಿ ಮತ್ತು ಜೋಳಗಳಿಗೆ ಬೆಂಬಲ ಬೆಲೆ ನಿಗಧಿ ಪಡಿಸಲಾಗಿದೆಯೇ;

ಆ) ಇದೇ ರೀತಿ ಇನ್ನು ಯಾವ ಯಾವ ಬೆಳೆಗಳಿಗೆ ಬೆಂಬಲ ಬೆಲೆ ನಿಗಧಿಪಡಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆ?

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):

ಅ) ಹೌದು.

ಆ) ಇದೇ ರೀತಿ ಮೆಕ್ಕೆ ಜೋಳ, ಬಿಳಿ ಜೋಳ ಮತ್ತು ಭತ್ತ ಬೆಳೆಗಳಿಗೆ ಬೆಂಬಲ ಬೆಲೆ ನಿಗಧಿ ಪಡಿಸಲಾಗಿದೆ.

1455(1606) ಶ್ರೀ ನರೇಂದ್ರ ಬಾಬು ಎನ್.ಎಲ್., (ರಾಜಾಜಿನಗರ) ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ರಾಜಾಜಿನಗರ ವಿಧಾನ ಸಭಾ ವ್ಯಾಪ್ತಿಯಲ್ಲಿ ವಿತರಿಸಲಾದ ಹಳದಿ ಮತ್ತು ಅಂತ್ಯೋದಯ (ಬಿಪಿಎಲ್) ಪಡಿತರ ಚೀಟಿಗಳ ಸಂಖ್ಯೆ ಎಷ್ಟು; (ಪಾಲಿಕೆ ವಾರ್ಡ್ ಪ್ರಕಾರ ವಿವರ ನೀಡುವುದು).

2) ಈ ತಾತ್ಕಾಲಿಕ ಕಾರ್ಡುಗಳನ್ನು ರದ್ದುಪಡಿಸಲು ಕಾರಣಗಳೇನು; ರದ್ದುಪಡಿಸಿದವುಗಳ ಬದಲಿಗೆ ಯಾವ ವ್ಯವಸ್ಥೆ ಕಲ್ಪಿಸಲಾಗಿದೆ; ಕಾರ್ಡು ವಿತರಿಸಲು ಇರುವ ಮಾನದಂಡವೇನು;

3) ಸದರಿ ಫಲಾನುಭವಿಗಳಿಗೆ ವಿತರಿಸಲು ಆಹಾರ ಸಾಮಗ್ರಿ ಪ್ರಮಾಣವೆಷ್ಟು;

4) ಗ್ರಾಹಕರು ಅಡಿಗೆ ಅನಿಲ ಹೊಂದಿದ್ದಲ್ಲಿ ಸೀಮೆಎಣ್ಣೆ ಕೋಟವನ್ನು ಹೆಚ್ಚಿಸುವುದೇನಾದರೂ ಸರ್ಕಾರದ ಮುಂದಿದೆಯೇ;

5) ಈ ಕ್ಷೇತ್ರದಲ್ಲಿ ಸೀಮೆಎಣ್ಣೆ ಗುತ್ತಿಗೆದಾರರು ಸರಿಯಾಗಿ ಸೀಮೆಎಣ್ಣೆ ವಿತರಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇಲ್ಲಿಯವರೆಗೆ ಎಷ್ಟು ಗುತ್ತಿಗೆದಾರರ ಪರವಾನಗಿ ರದ್ದು ಪಡಿಸಲಾಗಿದೆ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಈ ಕೆಳಕಂಡ ಪ್ರಕಾರ ರಾಜಾಜಿನಗರ ಮತಕ್ಷೇತ್ರದಲ್ಲಿ ಹಳದಿ ಮತ್ತು ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಹಳದಿ ಪಡಿತರ ಚೀಟಿಗಳು – 13754

ಎಎವೈ ಪಡಿತರ ಚೀಟಿಗಳು 894

ಒಟ್ಟು – 14648

ಪಾಲಿಕೆವಾರು ವಿವರ ಈ ಕೆಳಕಂಡಂತಿರುತ್ತದೆ.

ಕ್ರ.ಸಂ.	ವಾರ್ಡ್‌ಸಂಖ್ಯೆ	ಬಿಪಿಎಲ್ ಪಡಿತರ ಚೀಟಿಗಳ ಸಂಖ್ಯೆ	ಅಂತ್ಯೋದಯ ಪಡಿತರ ಚೀಟಿಗಳ ಸಂಖ್ಯೆ
1	8	1563	30
2	9	1319	27
3	10	2453	249
4	11	711	64
5	12	1122	106
6	14	441	8
7	15	2067	170
8	20	576	57
9	21	1585	99
10	22	737	52
11	23	1180	32
ಒಟ್ಟು		13754	894

2) ತಾತ್ಕಾಲಿಕ ಪಡಿತರ ಚೀಟಿಗಳನ್ನು ಗಣಕೀಕೃತ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಿ ವಿತರಿಸಲಾಗಿದೆ. ನಿಗದಿತ ಸಮಯದಲ್ಲಿ ಗಣಕೀಕೃತ ಪಡಿತರ ಚೀಟಿ ಮಾಡಿಸಿಕೊಳ್ಳದ ತಾತ್ಕಾಲಿಕ ಪಡಿತರ ಚೀಟಿಗಳು ರದ್ದಾಗಿವೆ. ರದ್ದು ಮಾಡಲ್ಪಟ್ಟ ಪಡಿತರ ಚೀಟಿದಾರರಿಗೆ ಪರ್ಯಾಯವಾಗಿ ಎಪಿಎಲ್ ಪಡಿತರ ಚೀಟಿ ನೀಡಲಾಗಿದೆ. ಸರ್ಕಾರದ ಆದೇಶದಂತೆ ವಾರ್ಷಿಕ ವರಮಾನ ನಗರ ಪ್ರದೇಶಕ್ಕೆ ರೂ.17000/– ಹಾಗೂ ಗ್ರಾಮಾಂತರಕ್ಕೆ ರೂ.12000/– ಕ್ಕಿಂತ ಕಡಿಮೆ ಇರುವ

ಬಡಕುಟುಂಬಗಳನ್ನು ಗುರುತಿಸಿ ಕಾರ್ಡು ವಿತರಿಸುವ ಬಗ್ಗೆ ಇರುವ ಮಾನದಂಡ ಅನುಸರಿಸಿ ನೀಡಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ: ಆನಾಸ 114 ಡಿಆರ್‌ಎ 2004, ದಿನಾಂಕ: 10–1–2005ರಲ್ಲಿ ಮನೆ–ಮನೆ ಪುನರ್‌ಸಮೀಕ್ಷೆ ಕಾರ್ಯ ಜನವರಿ, 2005ರಿಂದ ಪ್ರಾರಂಭವಾಗಿದ್ದು, ಏಪ್ರಿಲ್, 2005ಕ್ಕೆ ಮುಕ್ತಾಯವಾಗುತ್ತದೆ. ಈ ಸಮೀಕ್ಷೆಯಲ್ಲಿ ಕೈಬಿಟ್ಟು ಹೋದ ಅರ್ಹ ಕುಟುಂಬಗಳ ಮತ್ತು ಅನರ್ಹರು ಹೊಂದಿರುವ ಪಡಿತರ ಚೀಟಿಗಳ ಬಗ್ಗೆ ಸಮೀಕ್ಷೆ ನಡೆಸಿ ವಾರ್ಡ್ ಸಭೆಗಳ ಮುಂದೆ ಮಂಡಿಸಿ ಅನುಮೋದನೆ ಪಡೆದು ಅರ್ಹ ಕುಟುಂಬಗಳಿಗೆ ಪಡಿತರ ಚೀಟಿ ವಿತರಿಸಲು ಇಲಾಖೆ ಕ್ರಮ ಕೈಗೊಳ್ಳುವುದು.

ಪ.ಚೀ.	ಅಕ್ಕಿ (ಕೆ.ಜಿ)	ಗೋಧಿ (ಕೆ.ಜಿ)	ಸಕ್ಕರೆ (ಕೆ.ಜಿ)	ಸೀ.ಎಣ್ಣೆ (ಲೀ.)
ಎಎವೈ ಪ.ಚೀ.	28	7	3	8
ಹಳದಿ ಪ.ಚೀ.	20	5	3	8

4) – ಇಲ್ಲ –

5) ಈ ಕ್ಷೇತ್ರದಲ್ಲಿ ಪಡಿತರದಾರರಿಗೆ ಸಮರ್ಪಕವಿತರಣೆ ಮಾಡದೇ ಇರುವ ಕೆಲವೊಂದು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದ್ದು, ಅಂತಹ 5 ಜನ ಮಾರಾಟಗಾರರ ವಿರುದ್ಧ ಕರ್ನಾಟಕ ಅಗತ್ಯ ವಸ್ತುಗಳ (ಸಾವಿಪ) ನಿಯಂತ್ರಣ ಆದೇಶ 1992 ರನ್ವಯ ಕ್ರಮ ಜರುಗಿಸಲಾಗಿದೆ.

1456(1710) ಶ್ರೀ. ನಿಂಗಪ್ಪ ಹೆಚ್.(ಕುಣಿಗಲ್) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಹಳ್ಳಿಗಳಲ್ಲಿ ಇರುವ ಎಲ್ಲಾ ಸ್ತ್ರೀಶಕ್ತಿ ಸಂಘಗಳಿಗೆ ಸತ್ತುನಿಧಿ ನೀಡುವ ಬಗ್ಗೆ ಸರ್ಕಾರವು ಗಮನ ಹರಿಸುವುದೇ?

2) ಹಾಗಿದ್ದಲ್ಲಿ, ಈ ನಿಧಿಯನ್ನು 4–5 ಸ್ತ್ರೀಶಕ್ತಿ ಸಂಘಗಳ ಪೈಕಿ 1 ಅಥವಾ 2 ಸಂಘಗಳಿಗೆ ಮಾತ್ರ ನೀಡುತ್ತಿದ್ದು ಇದರಿಂದ ಉಳಿದ ಸಂಘಗಳಿಗೆ ತೊಂದರೆಯಾಗುವುದರ ಬಗ್ಗೆ ಸರ್ಕಾರವು ಗಮನ ಹರಿಸಿರುವುದೇ?

3) ಹಾಗಿದ್ದಲ್ಲಿ, ಸುತ್ತು ನಿಧಿ ನೀಡಲು ಕ್ರಮ ಕೈಗೊಳ್ಳುವುದೇ?

ಶ್ರೀಮತಿ. ಭಾಗೀರಥಿ ಮರುಳಸಿದ್ದನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):

1) ಸ್ತ್ರೀಶಕ್ತಿ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ರಚನೆಯಾಗಿರುವ ಎಲ್ಲಾ ಗುಂಪುಗಳಿಗೂ ಸರ್ಕಾರದಿಂದ ಸುತ್ತುನಿಧಿ ಬಿಡುಗಡೆ ಮಾಡಲಾಗಿದೆ.

2) ರಾಜ್ಯದಲ್ಲಿರುವ 1 ಲಕ್ಷ ಸ್ತ್ರೀಶಕ್ತಿ ಗುಂಪುಗಳಿಗೆ ಸುತ್ತುನಿಧಿ ಬಿಡುಗಡೆ ಮಾಡಿದೆ.

3) ಉದ್ಭವಿಸುವುದಿಲ್ಲ.

1457(1711) ಶ್ರೀ ನಿಂಗಪ್ಪ ಹೆಚ್.(ಕುಣಿಗಲ್) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಭೆ ಸಮಾರಂಭ ನಡೆಸಲು ಅನುಕೂಲವಾಗುವಂತೆ ಸ್ತ್ರೀಶಕ್ತಿ ಸಂಘಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಿಕೊಡಲು ಸರ್ಕಾರವು ಗಮನ ಹರಿಸುವುದೇ?

ಆ) ಇದ್ದರೆ ಯಾವಾಗ ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.